ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಸದಸ್ಯರೊಬ್ಬರು ಛೀಮಾರಿ ಎಂಬ ಒಂದು ಪದವನ್ನು ಈ ಸಭೆಯಲ್ಲಿ ಉಪಯೋಗಿಸಿದರು. ಆ ಪದ ಅನ್‌ಪಾರ್ಲಿಮೆಂಟರಿ ಎಂದ ನನ್ನ ಭಾವನೆ. ಆದ್ದರಿಂದ ತಾವು ಅದರ ಬಗ್ಗೆ ಒಂದು ರೂಲಿಂಗ್ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಈಗ ನನ್ನ ಪ್ರಶ್ನೆ ಏನಾಯಿತು ? ಏಕೆಂದರೆ ಆಮೇಲೆ ಟೈಂ ಆಗಿ ಹೋಯಿತು ಎಂಬುದಾಗಿ ಹೇಳುತ್ತೀರಿ.

ಅಧ್ಯಕ್ಷರು.—ತಮಗೆ ಆಮೇಲೆ ಅವಕಾಶ ಕೊಡುತ್ತೇನೆ.

Madam Speaker.—I Will take up Question No. 873 tomorrow

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಮಂತ್ರಿಗಳು ಇಲ್ಲಿಯವರೆಗೂ ಎಲ್ಲಿಗೆ ಹೋಗಿದ್ದರು ?

1—30 P.M.

ಅಧ್ಯಕ್ಷರು.—ಮಾನ್ಯ ಸದಸ್ಯರು ಯಾವಾಗಲೂ ಅಧ್ಯಕ್ಷರ ಮೂಲಕ ಪ್ರಶ್ನೆಹಾಕಬೇಕೇ ವಿನಾ, ನೇರವಾಗಿ ಯಾವ ಪ್ರಶ್ನೆಯನ್ನೂ ಕೇಳಬಾರದು.

ಶ್ರೀ ಎಸ್. ಬಂಗಾರಪ್ಪ.—ನಾನು ಕೇಳಿದ್ದು ತಮ್ಮ ಮೂಲಕವೇ.....

ಅಧ್ಯಕ್ಷರು.—ನನ್ನ ಮೂಲಕ ಎಂದು ಮಾನ್ಯ ಸದಸ್ಯರು ಬಾಯಿಗೆ ಬಂದ ಪ್ರಶ್ನೆ ಕೇಳುವುದಕ್ಕೆ ಇಲ್ಲಿ ಅವಕಾಶವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಸಚಿವರು ಪದೇ ಪದೇ ಅವರ ಮನಸೊ ಇಚ್ಛೆ ಇಲ್ಲಿಗೆ ಬರಬಹುದೋ ?

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರಿಗೆ ಅವರ ಪ್ರಶ್ನೆಗೆ ಉತ್ತರಬೇಕೋ, ಬೇಡವೋ ?

BHADRAVATHI-SHIMOGA CITY CORPORATION

830 SRI S. PANGARAPPA (Sorab).—Will the Minister for Municipal Administration be pleased to state.—

(*a*) whether it has come to the notice of the Government that Bhadravathi and Shimoga City are situated at a very short distance between them ;

(*b*) if so, whether there is a proposal before the Government to sanction a Corporation to these cities on the line of Hubli-Dharwar City Corporation ?

SRI B. BASAVALINGAPPA (Minister for Municipal Administration).—

(*a*) Yes

(*b*) No

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ (ಅ) ಪ್ರಶ್ನೆಗೆ 'ಬಂದಿದೆ' ಎಂದು ಉತ್ತರವನ್ನು ಹೇಳಿ (ಆ) ಪ್ರಶ್ನೆಗೆ—'ಇಲ್ಲ' ಎಂದು ಉತ್ತರ ಕೊಡುವುದಕ್ಕೆ ಕಾರಣಗಳೇನು ?

† ಶ್ರೀ ಬಿ. ಬಸವಲಿಂಗಪ್ಪ.— ಆ ವಿಷಯ ಸದ್ಯಕ್ಕೆ ಸರ್ಕಾರದವರ ಪರಿಶೀಲನೆಯಲ್ಲಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಒಂದು ಕಾರ್ಪೊರೇಷನ್ ಮಾಡುವುದಕ್ಕೆ ಏನೇನು ನೀತಿ ನಿಯಮಗಳಿರಬೇಕೋ, ಭದ್ರಾವತಿ ಮತ್ತು ಶಿವಮೊಗ್ಗ ಇವೆರಡನ್ನೂ ಸೇರಿಸಿ ಒಂದು ಕಾರ್ಪೊರೇಷನ್ ಮಾಡುವುದಕ್ಕೆ, ಆ ಅನುಕೂಲಗಳಿವೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ನಾನಾಗಲೇ ಉತ್ತರ ಹೇಳಿದ್ದೇನೆ.

SRI ABDUL KHUDDUS ANWAR.—Is it not a fact that there was a proposal to form Shimoga-Bhadravathi Corporation, but the M.I. S. L. has proved to be a bottleneck ?

SRI B. BASAVALINGAPPA.—There is no information about this.

ಶ್ರೀ ಕೆ. ಎಂ. ನಾಗಣ್ಣ.—ಅಲ್ಲಿ ಒಂದು ಕಾರ್ಪೊರೇಷನ್ ಮಾಡುವುದಕ್ಕೆ ಆಗದೆ ಇರುವಂಥ ಪ್ರಬಲವಾದ ಕಾರಣಗಳೇನು ಎಂಬುದನ್ನು ಮತ್ತೊಮ್ಮೆ ಪರಿಶೀಲನೆ ಮಾಡುವುದು ಸಾಧ್ಯವಲ್ಲವೆ ?

ಶ್ರೀ ಬಿ. ಬಸವಲಿಂಗಪ್ಪ.—ಅಂಥ ಪ್ರಬಲವಾದ ಕಾರಣಗಳೇನು ಎಂಬುದಕ್ಕೆ ಇನ್ನೊಂದು ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರವನ್ನು ಒದಗಿಸಲಿಕ್ಕಾಗುತ್ತದೆ. ಶಿವಮೊಗ್ಗದಲ್ಲಿರತಕ್ಕ ಪ್ರಜಾಸಂಖ್ಯೆ ಒಂದು ಲಕ್ಷ ಎರಡುಸಾವಿರದ ಒಂಭತ್ತು, ಮತ್ತು ಭದ್ರಾವತಿಯ ಜನಸಂಖ್ಯೆ ಒಂದು ಲಕ್ಷದ ಒಂದುಸಾವಿರದ ಮೂನ್ನೂರ ಐವತ್ತೆರಡು. ಇವೆರಡೂ ಬಹಳ ದೂರದಲ್ಲಿವೆ. ಆದುದರಿಂದ ಒಂದನ್ನೊಂದು ಕೂಡಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಕಾರ್ಪೊರೇಷನ್ ಮಾಡುವುದಕ್ಕಾಗುವುದಿಲ್ಲ.

SRI ABDUL KHUDDUS ANWAR.—In view of the fact that there is a Sugar Factory in between the two towns and of their being situated very near, is it not feasible to form a Corporation ?

ಶ್ರೀ ಬಿ. ಬಸವಲಿಂಗಪ್ಪ.—ಮುಂದೆ ಅವು ಹಾಗೆ ಬೆಳೆದಾಗ ಅದಕ್ಕೆ ಗಮನವನ್ನು ಕೊಡಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಭದ್ರಾವತಿಗೂ ಶಿವಮೊಗ್ಗಾಕ್ಕೂ ಆಷ್ಟೇನೂ ದೂರವಿಲ್ಲ. ಅವೆರಡೂ ಕತ್ತು ಮೈಲಿಗಳ ಅಂತರದಲ್ಲಿದ್ದರೂ ಈಗಾಗಲೇ ಅವೆರಡರ ಮಧ್ಯದಲ್ಲಿ ಹಾಲಿನಡೈರಿ ಮತ್ತು ಸಕ್ಕರೆ ಕಾರ್ಖಾನೆಗಳು ಬಂದಿರುವುದರಿಂದ ಒಂದಕ್ಕೊಂದು ಕೂಡಿದ ಹಾಗೆ ಆಗಿದೆ. ಹುಬ್ಬಳ್ಳಿ ಧಾರವಾಡಗಳಿಗೆ ಎಷ್ಟು ದೂರವಿದೆಯೋ ಆಷ್ಟೇ ದೂರ ಇಲ್ಲಿಯೂ ಇದೆ. ಆದ್ದರಿಂದ ಇಲ್ಲಿ ಒಂದು ಕಾರ್ಪೊರೇಷನ್ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲಿರತಕ್ಕ ಸನ್ನಿವೇಶಗಳೇ ಬೇರೆ. ಇಲ್ಲಿರತಕ್ಕ ಸನ್ನಿವೇಶಗಳೇ ಬೇರೆ.

ಶ್ರೀ ವಿ. ಎಸ್. ಪಾಟೀಲ್.—ಇವೆರಡಕ್ಕೂ ಇರತಕ್ಕ ಸನ್ನಿವೇಶಗಳನ್ನು ಹೋಲಿಸಿ ಎರಡೂ ಒಂದೇ ಆಗಿದ್ದರೆ ಆಗ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಆ ಕಂಡೀಷನ್ನುಗಳು ಒಂದೇ ಆಗಿದ್ದರೆ ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್ನನ್ನೂ ತೆಗೆದುಬಿಡಿ ಎಂದು ಹೇಳುತ್ತೀರಾ ?

ಶ್ರೀ ವಿ. ಎನ್. ಪಾಟೀಲ್.—ಇಲ್ಲಿಯೂ ಅಲ್ಲಿನ ಹಾಗೇ ಕಾರ್ಪೊರೇಷನ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಧಾರವಾಡದಲ್ಲಿ ಅನೇಕ ವಿದ್ಯಾ ಸಂಸ್ಥೆಗಳೂ ಕಾಲೇಜುಗಳೂ ಇವೆ. ಹುಬ್ಬಳ್ಳಿಯಲ್ಲಿ ಅನೇಕ ಕೈಗಾರಿಕೆಗಳಿವೆ. ಆಲ್ಲದೆ ಇವೆರಡರ ಮಧ್ಯೆ ಉಳಿದಿರತಕ್ಕ ಪ್ರದೇಶವಾದರೋ ಬಹಳ ಕಡಿಮೆ. ಆಲ್ಲಿ ಇನ್ನು ಐದು ಹತ್ತು ವರ್ಷಗಳಲ್ಲಿ ಅವೆರಡೂ ಸೇರಿ ಒಂದು ದೊಡ್ಡಪಟ್ಟಣವಾಗತಕ್ಕ ಚಿಹ್ನೆಗಳಿದ್ದರೆ ಇಲ್ಲಿ ಶಿವಮೊಗ್ಗಾ ಮತ್ತು ಭದ್ರಾವತಿಗೆ ಹೋಲಿಸಿದರೆ ಅಂಥ ಚಿಹ್ನೆಗಳಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಮಲೆನಾಡಿನಲ್ಲೂ ಒಂದು ಯೂನಿವರ್ಸಿಟಿ ಆಗುವುದರಲ್ಲಿದೆಯಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಅದು ಭವಿಷ್ಯದ ಮಾತಾಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ಈಗತಾನೆ ಮಾನ್ಯ ಸಚಿವರೇನು ಧಾರವಾಡ ಮತ್ತು ಹುಬ್ಬಳ್ಳಿಗಳ ಸಾಮ್ಯ ಹೇಳಿದರೋ ಅದೇ ಸಾಮ್ಯ ಮತ್ತು ಪರಿಸ್ಥಿತಿಗಳು ಇಲ್ಲಿಯೂ ಇರುತ್ತವೆ. ಆದ್ದರಿಂದ ಇದನು ವತ್ತೊಮ್ಮೆ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಆಗಲೇ ಉತ್ತರವನ್ನು ಹೇಳಿದ್ದೇನೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ವೇಳೆ ಮುಗಿಯಿತು.